## ಕಳೆದ ಸಂಚಿಕೆಯಲ್ಲಿ



ಹೊಸ ಮನೆಯೊಂದಿಗೆ ಸೊಸೆಯ ಪ್ರವೇಶವೂ ಆಗಿ ಶಿವರಾಮನ ಸಂಸಾರದಲ್ಲಿ ಮತ್ತೊಂದು ಅಧ್ಯಾಯ ಆರಂಭವಾಯಿತು. ಕಾಲಚಕ್ರದ ಉರುಳು ಪುನರಾವರ್ತನೆ ಆಗುತ್ತಿರುವಂತೆ ಸೀತಾಲಕ್ಷ್ಮಿಗೆ ಭಾಸವಾಗತೊಡಗಿತು. ವೆಂಕಟರಾಮುವಿನಂತೆ ಪ್ರಸನ್ನನೂ ಹೆಂಡತಿಗೆ ಅಂಜುತ್ತಿದ್ದ. ಮನೆಯಲ್ಲಿ ಎಲ್ಲರ ಮೇಲೆ ಸೊಸೆ ದರ್ಬಾರು ನಡೆಸುವುದನ್ನು ಶಿವರಾಮನಿಗೆ ಸಹಿಸಿಕೊಳ್ಳಲು ಕಷ್ಟವಾದರೂ ಅನುಭವಿಸದೆ ವಿಧಿಯಿರಲಿಲ್ಲ. ತಮ್ಮ ಮನೆಯಲ್ಲಿ ತಾವೇ ಅನ್ಯರಾದ ಭಾವನೆ ಶಿವರಾಮ–ಸೀತಾಲಕ್ಷ್ಮಿಗೆ ಉಂಟಾಯಿತು. ಸೊಸೆಗೆ ಮಗುವಾದ ನಂತರ ಮೊಮ್ಮಗುವಿನೊಂದಿಗೆ ಕಾಲ ಕಳೆಯುವ ಆಸೆಯೂ ಈಡೇರಲಿಲ್ಲ. ಸೊಸೆ ಮಗುವಿನ ಮೇಲೆ ತನ್ನದೇ ಹಕ್ಕು ಎನ್ನುವಂತೆ ವರ್ತಿಸತೊಡಗಿದಳು. ಸೊಸೆಯ ವರ್ತನೆಯಿಂದ ರೋಸಿ ಹೋದ ಶಿವರಾಮು, ಮಗನಿಂದ ಪ್ರತ್ಯೇಕವಾಗಿ ಉಳಿಯಲು ನಿರ್ಧರಿಸಿದ. ಪಟ್ಟಣದಲ್ಲಿ ಸಣ್ಣ ಮನೆ ಮಾಡಿಕೊಂಡು ಬದುಕುವ ಗಂಡನ ನಿರ್ಧಾರವನ್ನು ಸೀತಾಲಕ್ಷ್ಮಿಯೂ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು. ಅಪ್ಪ–ಅಮ್ಮನನ್ನು ಅನುನಯಿಸಲು ಯತ್ನಿಸಿದ ಪ್ರಸನ್ನ ವಿಫಲನಾದ. ಬದುಕಿನ ಸಂಜೆಯಲ್ಲಿ ಸೀತಾಲಕ್ಷ್ಮಿ ಮತ್ತು ಶಿವರಾಮು ಮತ್ತೆ ಒಂಟಿಯಾದರು.

---

ಸೀತಾಲಕ್ಷ್ಮಿಗೆ ತಿಂಗಳಾನುಗಟ್ಟಲೆ ಬೇಕಾಯ್ತು. ರಸ್ತೆ ದಾಟಬೇಕಾದರೆ ಜೀವ ಕೈಯಲ್ಲಿ ಹಿಡಿದು ದಾಟಬೇಕಾದ ಬೆಂಗಳೂರು ಪಟ್ಟಣಕ್ಕಿಂತ ದೊಡ್ಡ ಹಳ್ಳಿಯಂತಿದ್ದ ಊರು ಶಿವರಾಮನಿಗೆ ಹಿಡಿಸಿಬಿಟ್ಟಿತು. ವ್ಯಾಪಾರ, ವೈವಾಟು ಎಂದು ಸದಾ ಬಂದು ಹೋಗುತ್ತಿದ್ದ ಊರು ಅವನಿಗೆ ಹೊಸದು ಅನಿಸಲಿಲ್ಲ. ಎಡವಿ ಬಿದ್ದರೆ ಅವನಿಗೆ ಹಳೆಯ ಪರಿಚಿತರು ಸಿಕ್ಕುತ್ತಿದ್ದರು. ಅವರಿಗೂ ಪಟ್ಟಾಂಗ ಕೊಚ್ಚಲು ಸಮಾನ ವಿಷಯಗಳು, ಹಂಚಿಕೊಳ್ಳಲು ಹಳೆಯ ನೆನಪುಗಳು ಇದ್ದೇ ಇದ್ದುವು. ಮಳೆ, ಬೆಳೆ, ಕೊಳೆ ಎಂದು ಮಾತಾಡಿದರೆ ಅರ್ಥವೇ ಆಗದ ಬೆಂಗಳೂರಿನ ಹೊಸ ಪರಿಚಯಸ್ಥರಿಗಿಂತ ಹಳೆ ಪರಿಚಯದವರೊಡನೆ ವ್ಯವಹರಿಸುವಾಗ ಸಹಜವಾಗಿ ಆಪ್ತವೆನಿಸುತ್ತಿತ್ತು ಶಿವರಾಮನಿಗೆ.

‘ಗಂಡ ಚಿಗಿತುಕೊಂಡರು. ಆಗಿದ್ದೆಲ್ಲಾ ಒಳ್ಳೇದಕ್ಕೇ...’ ಎಂದು ಸೀತಾಲಕ್ಷ್ಮಿ ನೆಮ್ಮದಿ ಕಂಡುಕೊಳ್ಳುತ್ತಿದ್ದ ಕಾಲದಲ್ಲಿ ‘ಇಲ್ಲ, ಆಗುವುದೆಲ್ಲಾ ಒಳ್ಳೆಯದಕ್ಕೇ ಅಲ್ಲ’ ಎಂದು ಅರ್ಥ ಮಾಡಿಸುವ ಘಟನೆಯೊಂದು ನಡೆದು ಹೋಯ್ತು. ಒಂದು ದಿನ ಅಂಗಡಿಯಿಂದ ಸಾಮಾನು ತೆಗೆದುಕೊಂಡು ಭಾರದ ಕೈಚೀಲ ಹಿಡಿದು ಮನೆಗೆ ಬರುತ್ತಿದ್ದ ಶಿವರಾಮ. ಆದಷ್ಟು ರಸ್ತೆ ಬದಿಯಲ್ಲಿ ನಡೆದುಕೊಂಡು ಬರುವುದು ಅವನ ಅಭ್ಯಾಸ. ರಸ್ತೆ ಖಾಲಿ ಇದ್ದರೂ ಬದಿ ಬಿಟ್ಟು ಓಡಾಡುವವನಲ್ಲ. ಹಿಂದಿನಿಂದ ಕಾರಿನ ಹಾರ್ನ್ ಕೇಳಿ ಇನ್ನಷ್ಟು ಬದಿಗೆ ಸರಿದು ಪಕ್ಕದಿಂದ ಹಾದು ಹೋದ ಕಾರು ಗಮನಿಸಿದರೆ ಕಾರೊಳಗಿರುವುದು ಮತ್ಯಾರಲ್ಲ, ಡ್ರೈವರನ ಪಕ್ಕದ ಸೀಟಲ್ಲಿ ಕೂತವನು ಖಂಡಿತಾ ವೆಂಕಟರಾಮು. ಊರು ಬಿಟ್ಟು ಇಷ್ಟು ವರ್ಷ ಆಗಿದ್ದರೂ ಗುರುತು ಹಿಡಿಯಲಾಗದಷ್ಟು ಇಬ್ಬರೂ ಬದಲಾಗಿಲ್ಲ. ಇವನು ಅವನ ಕಡೆ ನೋಡುವುದಕ್ಕೂ, ಅವನು ಇವನ ಕಡೆ ನೋಡುವುದಕ್ಕೂ ಸಮ ಸಮ. ಶಿವರಾಮನ ಮಾತಲ್ಲೇ ಹೇಳುವುದಾದರೆ,

‘ಒಂದು ಕ್ಷಣ ಕಣ್ಣು ಕತ್ತಲೆ ಬಂದಂತಾಯ್ತು ಮಾರಾಯ್ತಿ. ಮೈಯಿಡೀ ಬೆವೆತು ಹೋಯ್ತು. ಎದೆ ಒಡ್ಕೋ ಹಂಗೆ ಬಡಿಯೋಕೆ ಶುರುವಾಯ್ತು. ಭೂಮಿ ಬಾಯ್ಬಿಡ್ಬಾರ್ದಾ ಅನ್ನಿಸ್ತು. ಕತ್ತೆ ಹೊರೆ ಹೊತ್ಗಂಡು ನಾನು ನಡ್ಕೊಂಡ್ಬರ್ತಿದ್ರೆ ಇವನು ಕಾರಲ್ಲಿ ಮೆರವಣಿಗೆ ಹೊರಟಿದಾನೆ. ಎಂತಾ ಗತಿ ಬಂತು ನೋಡು. ಇದ್ದೂ ಸತ್ತ ಹಾಗೆ ಆಯ್ತು...’

‘ಹಿಂಗೆಲ್ಲಾ ಆಗ್ಬೋದು ಅಂತ ಮೊದಲೇ ಗೊತ್ತಿರ್ಲಿಲ್ವೇನ್ರೀ? ಹೊಸ ವಿಷಯ ಅನ್ನೋ ಹಂಗೆ ಹೇಳ್ತೀಡಿ...’

‘ಕಾರು ತಗಂಡಿದಾನೆ ಅಂತ ನಂಗೆಲ್ಲಿ ಗೊತ್ತಿತ್ತು? ಅಟ್ಟಕ್ಕೇರಿ ಕೂತಿದಾನೇಂತ ಕಾಣುತ್ತೆ...’

‘ನೀವೇನು ಯಾವತ್ತೂ ಕಾರು ಕಂಡೇ ಇಲ್ವಾ? ಮಗನ ಹತ್ರ ದುಬಾರಿ ಕಾರು ಇಲ್ವಾ? ಅವನಿಗೆ ಎಲ್ಲಾ ಗೊತ್ತಿರುತ್ತೆ ಬಿಡಿ...’

‘ಮಗನ ಹತ್ರ ಕಾರಿದ್ರೆ ನಂಗೇನು ಬಂತು ಸೌಭಾಗ್ಯ? ನಾನು ಹೊರೆ ಹೊತ್ಗಂಡು ಬರೋದು ತಪ್ಪುತ್ತಾ?’

‘ನೀವೇ ಮಾಡ್ಕಂಡಿದ್ದಪ್ಪಾ’ ಅನ್ನಲು ಸೀತಾಲಕ್ಷ್ಮಿಯ ನಾಲಿಗೆ ತುರಿಸಿತು. ಆದರೆ ಮೊದಲೇ ಕೆರಳಿದವನನ್ನು ಮತ್ತಷ್ಟು ಕೆರಳಿಸುವ ಧೈರ್ಯ ಬರಲಿಲ್ಲ.

‘ನೋಡಿ, ಅವರು ಕಾರಲ್ಲಿ ಓಡಾಡ್ಲಿ, ವಿಮಾನದಲ್ಲಾದ್ರೂ ಓಡಾಡ್ಲಿ, ನಿಮಗೂ, ಅವರಿಗೂ ಸಂಬಂಧ ಇಲ್ಲ ಅನ್ನೋ ಹಂಗೆ ಇರ್ಬೇಕು ನೀವು. ಮತ್ತೆ ಏನಾರೂ ರಾಮಾಯಣ ಮಾಡ್ಕಂಡು ಕೂತ್ಗಂಬೇಡಿ. ಅತ್ಲಾಗೂ ಇಲ್ಲ, ಇತ್ಲಾಗೂ ಇಲ್ಲ ಅನ್ನೋ ತ್ರಿಶಂಕು ಸ್ಥಿತಿ ತಂದ್ಕಂಬೇಡಿ’

‘ಎಲ್ಲಾ ನೀನೇ ಹೇಳ್ಕೊಡ್ಬೇಕು. ನಂಗೆಲ್ಲಿದೆ ಬುದ್ಧಿ?’ ಅಂದ ಶಿವರಾಮ.

ಶಿವರಾಮನ ಕೋಪತಾಪ, ಅಸಹನೆ, ತಿಕ್ಕಲುತನಗಳು ಮರುಕಳಿಸತೊಡಗಿದ್ದು ಆವಾಗಿನಿಂದಲೇ? ಅಥವಾ ಅವನ ಸ್ವಭಾವ ಸಹಜ ಗುಣಗಳಾಗಿದ್ದ ಅವು ಮುನ್ನೆಲೆಗೆ ಬರಲು ಆ ಘಟನೆಯೊಂದು ನೆವವಾಯ್ತೇ? ಗಾದೆಯೇ ಉಂಟಲ್ಲ, ‘ಹುಟ್ಟು ಗುಣ ಸುಟ್ಟರೂ ಹೋಗಲ್ಲ’.

ಊರ ಮಂದಿ ಯಾರಾದರೊಬ್ಬರು ಶಿವರಾಮನಿಗೆ ಸಿಗುವುದು ಅಪರೂಪವಾಗಿರಲಿಲ್ಲ. ಬೇಡವೆಂದರೂ ತಮ್ಮನ ಮನೆಯ ಸುದ್ದಿ ಅವನ ಕಿವಿಯ ಮೇಲೆ ಬೀಳುತ್ತಿತ್ತು. ಮನಃಸ್ವಾಸ್ಥ್ಯ ಕೆಡಿಸುತ್ತಿತ್ತು. ಇಬ್ಬರು ಮಕ್ಕಳ ಮದುವೆ ಮಾಡಿದ್ದಾನೆ ವೆಂಕಟರಾಮು. ಇಬ್ಬರು ಮೊಮ್ಮಕ್ಕಳಿದ್ದಾರೆ. ಅಪ್ಪನ ಷಷ್ಟ್ಯಬ್ಧಿ ಶಾಂತಿಯನ್ನು ಮಕ್ಕಳು ಸೇರಿಕೊಂಡು ಎಷ್ಟು ವಿಜೃಂಭಣೆಯಿಂದ ಮಾಡಿದರು ಅಂದರೆ, ಒಂದು ಮದುವೆಗೆ ಹುಡಿ ಹಾರಿಸುವಷ್ಟು ದುಡ್ಡು ಖರ್ಚು ಮಾಡಿದರು. ಒಟ್ಟೊಟ್ಟಿಗೆ ಅಂತಲ್ಲ, ಆಗ ಈಗ ಇಂತಹ ಸುದ್ದಿಗಳು ಶಿವರಾಮನ ಕಿವಿ ತಲುಪುತ್ತಿದ್ದುವು. ಕೆಲವರು ಉದ್ದೇಶಪೂರ್ವಕವಾಗಿ ಹೇಳಿದರೆ ಕೆಲವರು ಮಾತಿನ ಚಪಲಕ್ಕೆ. ತೀರಾ ಪರಿಚಯದವರು ಸಿಕ್ಕಿದಾಗ ಶಿವರಾಮನಿಗೆ ಇನ್ನೊಂದು ಪೀಕಲಾಟ. ಮನೆಗೆ ಕರೆಯುವ ಮನಸ್ಸಿಲ್ಲ. ಕರೆಯದೆ ಬಿಡುವಂತಿಲ್ಲ. ಕರೆದರೆ ತಮ್ಮ ಬೇಳೆಕಾಳು ಅವರಿಗೆ ಗೊತ್ತಾಗಿ ಬಿಡುತ್ತದೆ ಎನ್ನುವ ಹೀನಾಯ ಭಾವನೆ ಒಂದು ಕಾರಣ. ವೃಥಾ ದುಡ್ಡು ಖರ್ಚಾಗುತ್ತದೆ ಎನ್ನುವುದು ಮತ್ತೊಂದು ಕಾರಣ. ಅವನು ಒತ್ತಾಯಿಸಿ ಕರೆಯದಿದ್ದರೂ ಹಳೆಯ ಸಲುಗೆಯಿಂದ ಮನೆಗೆ ಬಂದವರು ಅವನ ಪರಿಸ್ಥಿತಿ ನೋಡಿ ಪರಿತಾಪದ ಮಾತಾಡಿದರೆಂದರೆ ಶಿವರಾಮನ ಮನಸ್ಸು ಕುದ್ದು ಹೋಗುತ್ತಿತ್ತು. ‘ನಡೀರಿ, ಮತ್ಯಾವತ್ತೂ ಇಲ್ಲಿಗೆ ಬರ್ಬೇಡಿ’ ಎನ್ನುವ ಗಟ್ಟಿತನ ಕಳೆದುಕೊಂಡಿದ್ದನೇ ಶಿವರಾಮ? ಇರಬಹುದು. ಯಾರನ್ನಾದರೂ ಎದುರು ಹಾಕಿಕೊಳ್ಳುವ ಧೈರ್ಯ ಮಾಡದಿದ್ದವನಿಗೆ ಒಳಗಿನ ಕುದಿ ಹೊರಗೆ ಹಾಕಲು ಒದಗಿ ಬರುತ್ತಿದ್ದವಳು ಒಬ್ಬಳೇ, ಬಡಪಾಯಿ ಸೀತಾಲಕ್ಷ್ಮಿ. ಅನ್ನದಲ್ಲಿ ಕಲ್ಲು ಸಿಕ್ಕಿತು ಎನ್ನುವಂಥ ಕ್ಷುಲ್ಲಕ ಕಾರಣಕ್ಕೆ ಶಿವರಾಮ ಕೂಗಾಡಿದರೆ ಅದು ಆ ಕಾರಣಕ್ಕೆ ಅಲ್ಲ ಎಂದು ಗೊತ್ತಾಗಿಬಿಡುತ್ತಿತ್ತು ಸೀತಾಲಕ್ಷ್ಮಿಗೆ. ಯಾವುದೋ ವಿಷಯಕ್ಕೆ ಅವನ ತಲೆ ಹನ್ನೆರಡಾಣೆ ಆಗಿದೆ, ಅದನ್ನು ತೀರಿಸಿಕೊಳ್ಳುತ್ತಿರುವ ಪರಿ ಇದು ಎಂದು ಅಂದಾಜಾಗಿ ಬಿಡುತ್ತಿತ್ತು.

‘ಅಷ್ಟು ದೊಡ್ಡ ಮನೇಲಿದ್ದೋರು ಈ ಗೂಡಿನಲ್ಲಿ ಹೆಂಗೆ ಕಾಲ ಹಾಕ್ತೀರಿ ಮಾರಾಯ್ರಾ? ಏನೇ ಅನ್ನಿ, ನೀವು ಜಮೀನು ಮಾರಿ ಊರು ಬಿಟ್ಟಿದ್ದು ಸಮ ಆಗ್ಲಿಲ್ಲ...’

‘..’

‘ಹೋಗ್ಲಿ, ಮಗನ ಮನೇಲಿ ತಣ್ಣಗೆ ಇರ್ಬೋದಿತ್ತು...’

‘ಅಲ್ಲೂ ಉಸಿರು ಕಟ್ಟಿತ್ತು. ಬೆಂಗಳೂರು ಅಂದ್ರೆ ತಮಾಷೇಂತ ಮಾಡಿದೀರಾ? ಹೊರಗೆ ಕಾಲಿಡೋ ಹಂಗಿಲ್ಲ. ಜನ ಜನ ಜನ. ಜನರಿಗಿಂತ ಹೆಚ್ಚು ಕಾರು, ಬಸ್ಸು, ಆಟೊ, ಲಾರಿ. ಒಂಥರಾ ಜಾತ್ರೆ, ಗಜಿಬಿಜಿ.